# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.53/2025

Pw-09

Cw-09

ಸಾಕ್ಷಿದಾರರ ಹೆಸರುಃ ಶ್ರೀ ಲಿಂಗಪ್ಪ ರಣಸೂತ

ತಂದೆಃಗಂಡನ ಹೆಸರುಃ ಶ್ರೀ ಶಿವಪ್ಪ

ವಯಸ್ಸುಃ 40 ವರ್ಷ

ಉದ್ಯೋಗಃ ಗುತ್ತಿಗೆದಾರ

ವಾಸ ಸ್ಥಳಃ ವೈ.ಟಿ ಹೊನ್ನತ್ತಿ, ತಾಃ ರಾಣೇಬೆನ್ನೂರು

**ದಿನಾಂಕ:17.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು ಕಳೆದ 10 ವರ್ಷಗಳಿಂದ ರಾಣೇಬೆನ್ನೂರು ಮತ್ತು ಹಾವೇರಿ ಪ್ರದೇಶಗಳಲ್ಲಿ ಗುತ್ತಿಗೆದಾರನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಜಿಲ್ಲಾ ಪಂಚಾಯತಿ ಕಚೇರಿಗೆ ಬರುವ PRD ಯೋಜನೆಯಡಿ ವೈ.ಟಿ ಹೊನ್ನತ್ತಿ ಗ್ರಾಮದ ಗ್ರಾಮ ಪಂಚಾಯತಿ ಕಟ್ಟಡ ಕಟ್ಟುವ ಕೆಲಸದ ಗುತ್ತಿಗೆಯನ್ನು ಪಡೆದುಕೊಂಡಿರುತ್ತೇನೆ. ಈ ಸಂಬಂಧವಾಗಿ ನನಗೆ work order ಸಹ ನೀಡಲಾಗಿತ್ತು.

2. ದಿನಾಂಕಃ 20.06.2025 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಗ್ರಾಮ ಪಂಚಾಯತಿ ಕಟ್ಟಡ ಕಟ್ಟುವ ಜಾಗದಲ್ಲಿ ಲೈನ್ ಔಟ್ ಹಾಕುವ ಕೆಲಸ ಮಾಡುತ್ತಿದ್ದೆನು. ಸದರಿ ಕೆಲಸದ ಸಹಾಯಕ್ಕಾಗಿ ಚಾಸಾ-1, 4 ಮತ್ತು 5 ರವರನ್ನು ಕರೆಸಿಕೊಂಡಿದ್ದೆನು. ಸದರಿ ಲೈನ್ ಔಟ್ ಹಾಕುವ ಕೆಲಸವು ಮಧ್ಯಾಹ್ನ 1-1½ ಗಂಟೆಗೆ ಮುಗಿಯಿತು. ನಂತರ ನಾನು ಲೈನ್ ಔಟ್ ಕೆಲಸ ಮುಗಿದ ಬಳಿಕ ನಮ್ಮ ಮನೆಗೆ ಹೊರಟು ಹೋದೆನು. ಆರೋಪಿತರು ಮತ್ತು ಚಾಸಾ-1, 4 ಮತ್ತು 5 ರವರ ನಡುವೆ ಪಂಚಾಯತಿ ಕಟ್ಟಡ ಕಟ್ಟುವ ಸಲುವಾಗಿ ಜಗಳ ಆಗಿರುವ ವಿಚಾರ ನನಗೆ ಕೇಳಿ ಗೊತ್ತಾಯಿತು. ನಾನು ಪೊಲೀಸರ ಮುಂದೆ ಘಟನೆ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ.

**<u>ಪಾಟೀ ಸವಾಲುಃ 1 ರಿಂದ 6 ನೇ ಆರೋಪಿತರ ಪರವಾಗಿ ಶ್ರೀ ಎನ್.ಜಿ.ಹೆಚ್ ವಕೀಲರಿಂದಃ</u>**

3. ನಾನು ಪೊಲೀಸರ ಮುಂದೆ ಯಾರಿಂದ ಆರೋಪಿತರು ಮತ್ತು ಚಾಸಾ-1, 4 ಮತ್ತು 5 ರವರ ನಡುವೆ ಜಗಳ ಆಗಿದೆ ಎಂದು ಗೊತ್ತಾಯಿತು ಎಂದು ಹೇಳಿ ಬರೆಸಿರುವುದಿಲ್ಲ. ಜಿಲ್ಲಾ ಪಂಚಾಯತ್ ರವರು ನೀಡಿರುವ work order ಪ್ರಕಾರ ನಾನು 120 ದಿನದೊಳಗೆ ಕೆಲಸವನ್ನು ಮುಗಿಸಬೇಕಾಗಿತ್ತು ಎಂದರೆ ನಿಜ. ಜಿಲ್ಲಾ ಪಂಚಾಯತ್ ರವರು work order ನ್ನು ದಿನಾಂಕಃ03.02.2025 ರಂದು ಕೊಟ್ಟಿದ್ದರು. ಜಿಲ್ಲಾ ಪಂಚಾಯತ್ ರವರು ನೀಡಿರುವ work order ಪ್ರಕಾರ ನಾನು ಯಾವುದೇ ಕೆಲಸವನ್ನು ಮಾಡದೇ ಇದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರ ಮತ್ತು ಚಾಸಾ-1, 4 ಮತ್ತು 5 ರವರ ನಡುವೆ ಜಗಳ ಆದ ವಿಚಾರ ನನಗೆ ಕೇಳಿ ಗೊತ್ತಾಯಿತು ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಿನಾಂಕಃ20.06.2025 ರಂದು ನಾನು ಚಾಸಾ-1, 4 ಮತ್ತು 5 ರವರನ್ನು ಲೈನ್ ಹಾಕುವ ಕೆಲಸಕ್ಕಾಗಿ ಕರೆದುಕೊಂಡು ಹೋಗಿದ್ದೆ ಎಂದು ಮತ್ತು ಸದರಿ ಕೆಲಸವನ್ನು ಮಧ್ಯಾಹ್ನ 1.30 ರವರೆಗೆ ಮಾಡಿಸಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.